ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1533/2024

| | | | |
|---|---|---|---|
| ಹೆಸರು | : | ಬಾಬು ಎಂ ಕಿಲಾರಿ | ಸಿ .ಡಬ್ಲ್ಯೂ :16 |
| ತಂದೆ ಹೆಸರು | : | ಎಂ ಎಸ್ ಕಿಲಾರಿ | ಪಿ .ಡಬ್ಲ್ಯೂ :4 |
| ವಯಸ್ಸು | : | 57 ವರ್ಷ | |
| ಉದ್ಯೋಗ | : | ಪಿ ಎಸ್ ಐ ಮಹಿಳಾ ಠಾಣೆ ತುಮಕೂರು | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ 27-10-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 21-08-2022 ರಿಂದ ದಿಃ 10-04-2025 ರವರೆಗೆ ಗುಬ್ಬಿ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 19-01-2024 ರಂದು ನಾನು ಠಾಣಾ ಪ್ರಭಾರದಲ್ಲಿದಾಗ ಬೆಳಗ್ಗೆ 10.30 ಗಂಟೆಯಲ್ಲಿ ಫಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಮುದ್ರಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 18/2024 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ನಿಪಿ -1 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 (ಬಿ ) ಎಂದು ಗುರುತಿಸಲಾಯಿತು.

ಈ ಪ್ರಕರಣವು ಘೋರ ಪ್ರಕರಣವಾಗಿರುವುದರಿಂದ ಚಾಸಾ -17 ರವರಿಗೆ ಮುಂದಿನ ತನಿಖೆಗಾಗಿ ಪ್ರಕರಣವನ್ನು ವರ್ಗಾಯಿಸಿದ್ದೇನೆ .

ಚಾಸಾ -17 ರವರು ಬೇರೆ ಪ್ರಕರಣದಲ್ಲಿ ತನಿಖೆಯಲ್ಲಿದ್ದುದರಿಂದ ಈ ಪ್ರಕರಣದ ತನಿಖೆಯನ್ನು ಮುಂದುವರೆಸುವಂತೆ ನನಗೆ ತಿಳಿಸಿದ್ದು ನಂತರ ನಾನು ಅದೇ ದಿನ ಬೆಳಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಗುಬ್ಬಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಚಾಸಾ -5 ರಿಂದ 7 ರವರ ಸಮಕ್ಷಮ ಶವ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ .

ಅದೇ ದಿನ ಚಾಸಾ -8 ಮತ್ತು 9 ರವರ ಹೇಳಿಕೆಯನ್ನು ಪಡೆದಿರುತ್ತೇನೆ .ಮೃತ ದೇಹವನ್ನು ಅವರ ವಾರಸುದಾರರಿಗೆ ನೀಡಿ ಸ್ವೀಕೃತಿ ಪಡೆದಿದ್ದೇನೆ .

ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 17 ರವರಿಗೆ ವಹಿಸಿಕೊಟ್ಟಿದ್ದೇನೆ.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಚಾಸಾ -1 ರವರು ಸುಳ್ಳು ವಿವರಗಳ ದೂರು ನೀಡಿದ್ದಾರೆ , ನಾನು ಅದನ್ನು ಸರಿಯಾಗಿ

ಪರಿಶೀಲಿಸದೇ ಆರೋಪಿತರ ವಿರುದ್ದ ಪ್ರ ವ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಸ್ಥಳಕ್ಕೆ ಭೇಟಿ ನೀಡಿಲ್ಲ . ಮೃತ ವ್ಯಕ್ತಿಯ ಕುಟುಂಬಕ್ಕೆ ಸಹಾಯವಾಗಲೆಂದು ಆರೋಪಿತರ ವಿರುದ್ದ ಸುಳ್ಳು ವಿವರಗಳ ಪ್ರ ವ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.